ದಿನಾಂಕಃ 28-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ.ಕೆ ವಿ ಎಸ್ ವಕೀಲರಿಂದ

ನನ್ನ ಸ್ವಂತ ಊರು ಮೈಲಾಪುರ. ನಾನು ಜಮೀನು ಕೆಲಸ ಮಾಡಿಸುತ್ತೇನೆ. ಆ ಜಮೀನುಗಳು ನನ್ನ ಹೆಸರಿನಲ್ಲಿ ಇರುವುದಿಲ್ಲ. ಯೋಗಿನಾರೇಯಣ ಮಟದಲ್ಲಿ ಉಸ್ತುವಾರಿ ನೋಡಿ ಅಂತ ಹೇಳಿ ನನಗೆ ಉಸ್ತುವಾಗಿ ಕೊಟ್ಟಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಮಟದಿಂದ ದಾಖಲೆ ಪತ್ರಗಳನ್ನು ನೀಡಿರುತ್ತಾರೆ ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮಟದಿಂದ ಜಮೀನಿನ ಉಸ್ತುವಾರಿಗೆ ಬೇಕಾದ ಖರ್ಚಿಗೆ ಸಂಬಂಧಿಸಿದಂತೆ ಹಣ ನೀಡುತ್ತಾರೆ ನಮಗೇನೂ ಕೊಡುವುದಿಲ್ಲ. ಮಟದಿಂದ ನನಗೆ ಯಾವುದೇ ಆದಾಯ ಇರುವುದಿಲ್ಲ. ನನ್ನ ಮಗಳು ಕೆಲಸ ಮಾಡುತ್ತಿದ್ದಾಳೆ. ನನ್ನ ಸಂಸಾರವನ್ನು ನನ್ನ ಮಗಳು ನೋಡಿಕೊಳ್ಳುವುದಿಲ್ಲ ನನ್ನ ಹೆಂಡತಿ ನೋಡಿಕೊಳ್ಳುತ್ತಾರೆ. ನಿಮಗೆ ಸಂಬಂಧಪಡದ ಎಷ್ಟು ದಾವೆಗಳಲ್ಲಿ ನೀವು ಸಾಕ್ಷ್ಯ ನುಡಿದಿರುತ್ತೀರಿ ಎಂದರೆ ನಾನು ಯಾ ಕೇಸಿನಲ್ಲಿ ಸಾಕ್ಷ್ಯ ನುಡಿದಿರುವುದಿಲ್ಲ. ಯೋಗಿನಾರೇಯಣ ಮಟಕ್ಕೆ ಸಂಬಂಧಪಟ್ಟಂತೆ ಎಷ್ಟು ಸಿವಿಲ್ ವ್ಯಾಜ್ಯಗಳು ಬೆಂಗಳೂರಿನಲ್ಲಿ ಮತ್ತು ಇಲ್ಲಿ ನಡೆಯುತ್ತಿವೆ ಎಂದರೆ ನನಗೆ ಗೊತ್ತಿಲ್ಲ. ಮಟಕ್ಕೆ ಸಂಬಂಧಪಟ್ಟ ಜಮೀನಿಗೆ ಸಂಬಂದಪಟ್ಟ ವ್ಯಾಜ್ಯಗಳಲ್ಲಿ ದಾಖಲೆಗಳನ್ನು ನೀವೇ ಪೂರೈಸಬೇಕು ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ವಾದಿಯು ಯಾರ ಮೇಲೆ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಎಷ್ಟು ದಾವಾ ಆಸ್ತಿಗಳ ಮೇಲೆ ದಾವೆ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ವಾದಿ ಏನು ಕೆಲಸ ಮಾಡುತ್ತಾರೆ ಅಂತ ಗೊತ್ತಿಲ್ಲ. ವಾದಿ ಸೌಮ್ಯ ರವರ ಗಂಡನ ಹೆಸರು ವಿಶ್ವನಾಥ. ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಇರಬಹುದು. ಒಬ್ಬ ವ್ಯಕ್ತಿ ಯಾವ ಆಧಾರ ಮೇಲೆ ಸ್ವಾಧೀನದಲ್ಲಿ ಇರುತ್ತಾರೆ ಅಂತ ಹೇಳುತ್ತೀರಿ ಎಂದರೆ ನಮ್ಮ ಜಮೀನಿನ ಪಕ್ಕದಲ್ಲಿ ಜಮೀನು ಇದ್ದು ಅಲ್ಲಿ ಕೆಲಸ ಮಾಡುತ್ತಿದ್ದರು ಆ ಕಾರಣ ಹೇಳುತ್ತೇನೆ. ಭೌತಿಕವಾಗಿ ಇರುವುದರ ಆಧಾರದ ಮೇಲೆ

ನೀವು ಸಾಕ್ಷ್ಯ ನುಡಿಯುತ್ತೀರಿ ಎಂದರೆ ಹೌದು. ಈ ದಿನ ನೀವು ಹೇಳುತ್ತಿರುವ ಸಾಕ್ಷ್ಯವು ಯಾವ ಸರ್ವೆ ನಂಬರ್ ಗೆ ಸಂಬಂಧಪಟ್ಟಿದ್ದು ಎಂದರೆ ಗೊತ್ತಿಲ್ಲ. ಸೌಮ್ಯ ರವರು 17 ವರ್ಷಗಳಿಂದ ಯಾವ ಯಾವ ಬೆಳೆ ಇಟ್ಟಿದ್ದರು, ಎಷ್ಟು ಹಣ ಹಾಕಿದ್ದರು ಎಂದು ಗೊತ್ತಾ ಎಂದರೆ ಬೆಳೆ ಇಟ್ಟಿರುವ ಬಗ್ಗೆ ಗೊತ್ತಿರುತ್ತದೆ ಹಣ ಹಾಕಿರುವ ಬಗ್ಗೆ ಗೊತ್ತಿಲ್ಲ.

ಮುನಿಶಾಮಿರವರಿಗೆ ಮೊದಲು ಈ ದಾವಾ ಸ್ವತ್ತಿನಲ್ಲಿ ಯಾರು ಮೊದಲು ಇದ್ದರು ಎಂದರೆ ಗೊತ್ತಿರುವುದಿಲ್ಲ. ಸೌಮ್ಯ ಹಾಗೂ ಮುನಿಶಾಮಿ ಇರುವುದು ಗೊತ್ತಿರುತ್ತದೆ. ದಾವಾ ಸ್ವತ್ತಿನಲ್ಲಿ ಮೊದಲು ಕೊಂಡಪ್ಪ ಎನ್ನುವವರು ಕೆಲಸ ಮಾಡುತ್ತಿದ್ದು ಈ ಮಂಜುನಾಥ ಎನ್ನುವವರು ಕೆಲಸ ಮಾಡುತ್ತಿದ್ದಾರೆ. ಆ ಸ್ವತ್ತಿನಲ್ಲಿ ಏನು ಬೆಳೆ ಬೆಳೆಯುತ್ತಾರೆ ಎಂಬುದರ ಬಗ್ಗೆ ಕೊಂಡಪ್ಪ ಮತ್ತು ಮಂಜುನಾಥ ರವರಿಗೆ ಚೆನ್ನಾಗಿ ಗೊತ್ತು ಎಂದರೆ ಹೌದು. ಮುನಿಶಾಮಿ ರವರಿಂದ ನಮ್ಮ ಮಟಕ್ಕೆ ಸಂಬಂಧಿಸಿದಂತೆ ಜಮೀನನ್ನು ಖರೀದಿ ಮಾಡಿರುತ್ತೇವೆ. ಅವರು ಯಾವ ಅವಶ್ಯಕತೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಮುನಿಶಾಮಿ ರವರು ಮಾರಾಟ ಮಾಡಿರುವ ಜಮೀನು ನಿಮ್ಮ ಜಮಿಲೀನಿಗೆ ಹೋಗುವ ದಾರಿಗೋಸ್ಕರ ಖರೀದಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಮಟದ ಆಸ್ತಿಯನ್ನು ಅಭಿವೃದ್ಧಿ ಪಡಿಸಲು ಆ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಮುನಿಶಾಮಿ ರವರ ಜಮೀನನ್ನು ನಿಮ್ಮ ಮಟಕ್ಕೆ ಖರೀದಿ ಮಾಡಿದ್ದರಿಂದ ಅವರ ಮೇಲೆ ಒಲವು ಮೂಡಿ ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಮಾವಿನ ತೊಪು ಇದ್ದು 400 ಮಾವಿನ ಗಿಡಗಳು ಇರುತ್ತವೆ. 400 ಮರಗಳು ಒಂದು ಮರದಿಂದ ಇನ್ನೊಂದು ಮರಕ್ಕೆ 30 ಅಡಿ ಅಂತರ ಇರುತ್ತದೆ. ಆ ಮರಗಳಿಗೆ ಸುಮಾರು 13 ವರ್ಷ ವಯಸ್ಸಾಗಿರುತ್ತದೆ. ಆ ಮರಗಳನ್ನು ನಾವೇ ನಾಟಿ ಮಾಡಿ ಬೆಳೆಸಿರುತ್ತೇವೆ. ಸೌಮ್ಯ ರವರು ಪ್ರತೀ ಬೆಳೆಗೆ ಅವರೇ ಬಂದು ಖುದ್ದಾಗಿ ಬೆಳೆ ಇಡುತ್ತಾರಾ ಎಂದರೆ ಅವರು ಕೆಲಸಗಾರರನ್ನು ಇಟ್ಟುಕೊಂಡು ಬೆಳೆ ಬೆಳೆಯುತ್ತಾರೆ. ದಾವಾ ಜಮೀನಿನ ಪಶ್ಚಿಮಕ್ಕೆ ಯಾರು ಇದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಿಮಗೆ ಏನೂ ವಿಷಯ ಗೊತ್ತಿಲ್ಲದೆ ಇದ್ದರೂ ಕೂಡ ಮುನಿಶಾಮಿ ರವರು ನಿಮ್ಮ ಮಟಕ್ಕೆ ಜಮೀನು ಕೊಟ್ಟಿದ್ದಾರೆ ಅಂತ ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವುದೇ ಜಮೀನಿನಲ್ಲಿ ತರಕಾಗಿ ಬೆಳೆ

ಬೆಳೆಯಬೇಕು ಎಂದರೆ ಗಾಳಿ ಬೆಳಕು ಇರಬೇಕು ಎಂದರೆ ಸರಿ. ಜಮೀನಿನಲ್ಲಿ ಮರಗಳು ಇದ್ದರೆ ಬೆಳೆಗಳು ಚೆನ್ನಾಗಿ ಬರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ವ್ಯವಸಾಯದ ಬಗ್ಗೆ ಯಾವುದೇ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.